**ಅಸಲ ದಾವಾ ನಂ.512/2019**

**ಮೆ: 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಗೋಕಾಕ, ಸ್ಥಳಃ ಗೋಕಾಕ**

ನಡುವೆ

DW3

1] ಶ್ರೀ ಶಂಕರ ತಂದೆ ಸಿದ್ದಪ್ಪ ಗುಂಡಪ್ಪಗೋಳ

... ವಾದಿ.

ವಿರುದ್ಧ

1] ಶ್ರೀ ಪ್ರಸನ್ನ ತಂದೆ ಸುಭಾಷ ಗುಂಡಪ್ಪಗೋಳ ಹಾಗೂ ಇತರರು

... ಪ್ರತಿವಾದಿಯರು

NOTARY R.S. Beerannavar Gokak Rev. Taluka District:Belagavi Regd. No.Law/ LCL-213/2025 Exp.16-11-2030 OF KARNATAKA

**ಡಿ.ಡಬ್ಲ್ಯೂ3 ಇವರ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕ**

ಇದರಲ್ಲಿ ನಾನು ಶ್ರೀ ಮರಸಿದ್ದ ತಂದೆ ಸಿದ್ದಪ್ಪ ಮರಸಿದ್ದಪ್ಪಗೋಳ, ವಯಾ: 77 ವರ್ಷ, ಉದ್ಯೋಗಃ ಒಕ್ಕಲುತನ, ಸಾ: ರಾಜಾಪೂರ, ತಾ: ಮೂಡಲಗಿ, ಜಿ: ಬೆಳಗಾವಿ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡಿದ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1] ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯವಿರುತ್ತದೆ. ಪ್ರಕರಣದ ವಸ್ತುಸ್ಥಿತಿ ಮಾಹಿತಿ ಇರುತ್ತದೆ. ಆದ್ದರಿಂದ ಸದರಿ ಪ್ರತಿಜ್ಞಾ ಪತ್ರವನ್ನು ಮಾಡಲು ಅರ್ಹನಿರುತ್ತೇನೆ.

2] ನಾನು ಖಾಯಂ ತರೀಖ ರಾಜಾಪೂರ ಗ್ರಾಮದ ರಹವಾಸಿ ಇರುತ್ತೇನೆ. ನನಗೆ ಸದರಿ ಗ್ರಾಮದಲ್ಲಿ ಜಮೀನು ಇರುತ್ತದೆ. ನನ್ನ ಜಮೀನು ಮತ್ತು ಪ್ರತಿವಾದಿಯರ ಜಮೀನು ಎರಡು ಪಟ್ಟಿ ಬಿಟ್ಟು ಅಂತರದಲ್ಲಿರುತ್ತವೆ. ನನ್ನ ಜಮೀನದಲ್ಲಿ ನಾನು ಮನೆ ಕಟ್ಟಿಕೊಂಡು ವಾಸಿಸುರುತ್ತೇನೆ. ಹಾಗೂ ಅದೇ ರೀತಿ ಮೃತ ಸುಭಾಷ ತಂದೆ ಸಿದ್ದಪ್ಪ ಗಂಡಪ್ಪಗೋಳ ಇವರು ಸಹ ಮನೆ

NO. OF CORRECTIONS

ಕಟ್ಟಿಕೊಂಡಿರುತ್ತಾರೆ. ಅವನ ಮೃತ ನಂತರ ಈ ಪ್ರಕರಣದ ಪ್ರತಿವಾದಿಯರು ವಾಸಿಸಿರುತ್ತಾರೆ.

3] ದಿ: 08-10-2003 ರಂದು ಈ ಪ್ರಕರಣದ ವಾದಿ ಮತ್ತು ಮೃತ ಸುಭಾಷ ತಂದೆ ಸಿದ್ದಪ್ಪ ಗುಂಡಪ್ಪಗೋಳ ನನ್ನನ್ನು ಹಾಗೂ ಇನ್ನು ಮೂರು ಜನ ಸಾಕ್ಷಿದಾರರ ಹೆಸರು ರಾಮಪ್ಪ ಸಿದ್ರಾಮ ಗುಂಡಪ್ಪಗೋಳ, ಬಾಳಪ್ಪ ಪೀರಪ್ಪ ಗಡಹಿಂಗ್ಲಜ ಮತ್ತು ಕೇದಾರಿ ಕ ಲಕ್ಕುಂಡಿ, ನಮ್ಮನ್ನು ಕರೆಯಿಸಿದ ಪ್ರಕಾರ ಈ ಮೇಲಿನ ದಿನಾಂಕದಂದು ವಾದಿ ಶಂಕರ ಸಿದ್ದಪ್ಪ ಗುಂಡಪ್ಪಗೋಳ ಇವರು ದುರದುಂಡಿ ಗ್ರಾಮದ ಜಮೀನು ರಿ.ಸ.ನಂ.20/1ಅ/1/1ಅ/ಕ/1, ನೇದ್ದರ ಒಟ್ಟು ಕ್ಷೇತ್ರದ ಪೈಕಿ 01ಎ-17ಗು, ಜಮೀನವನ್ನು ಮೃತ ಸುಭಾಷ ಸಿದ್ದಪ್ಪ ಗುಂಡಪ್ಪಗೋಳ ಇವರ ಹೆಸರಿನಲ್ಲಿ ತಾನು ಮತ್ತು ಅವನ ಹೆಂಡತಿ ಮಕ್ಕಳಾದ ಶಾಂತಾ, ಮಕ್ಕಳಾದ ಮಾಧುರಿ ಮತ್ತು ಈರವ್ವ ಜಂಟಿಯಾಗಿ ಮೃತ ಸುಭಾಷ ಸಿದ್ದಪ್ಪ ಗುಂಡಪ್ಪಗೋಳ ಇವನ ಹೆಸರಿಗೆ ಈ ಮೇಲಿನ 01ಎ-17ಗು ಜಮೀನವನ್ನು ಹಕ್ಕು ಬಿಟ್ಟು ಕೊಟ್ಟಿರುತ್ತಾರೆ. ಅದೇ ದಿವಸ ಮೃತ ಸುಭಾಷ ಸಿದ್ದಪ್ಪ ಗುಂಡಪ್ಪಗೋಳ ಈತನಿಗೆ ಕಬ್ಜಾ ಕೊಟ್ಟಿರುತ್ತಾನೆ. ಅದೇ ರೀತಿ ಈ ಮೇಲಿನ ದಿನದಂದು ಶಂಕರ ಸಿದ್ದಪ್ಪ ಗುಂಡಪ್ಪಗೋಳ ಇವರು ತಾನೇ ಮಾಹಿತಿ ಕೊಟ್ಟು ಹಕ್ಕು ಬಿಟ್ಟ ಪತ್ರವನ್ನು ಬರೆಯಿಸಿರುತ್ತಾನೆ. ಸದರಿ ಹಕ್ಕು ಬಿಟ್ಟ ಪತ್ರಕ್ಕೆ ತಾನು ಕನ್ನಡದಲ್ಲಿ, ಅವನ ಹೆಂಡತಿ ತನ್ನ ಎಡಗೈ ಹೆಬ್ಬಟ್ಟನ್ನು ಹಾಗೂ ಅವನ ಮಗಳು ಮಾಧುರಿ ಕನ್ನಡದಲ್ಲಿ ಸದರಿ ಹಕ್ಕ ಬಿಟ್ಟ ಪತ್ರದ ಮೇಲೆ ಸಹಿ ಮಾಡಿರುತ್ತಾಳೆ, ಹಾಗೂ ಇನ್ನೊಬ್ಬ ಮಗಳು ಈರವ್ವ ತನ್ನ ಎಡಗೈ ಹೆಬ್ಬಟ್ಟಿನಲ್ಲಿ ಸಹಿ ಮಾಡಿರುತ್ತಾಳೆ. ಅದೇ ರೀತಿ ನಾನು ಸಹ ಕನ್ನಡದಲ್ಲಿ ಹಾಗೂ ಉಳಿದ ಸಾಕ್ಷಿದಾರರು ತಮ್ಮ ಸಹಿಯನ್ನು ಕನ್ನಡದಲ್ಲಿ ಮಾಡಿರುತ್ತಾರೆ. ದಿ:08-10-2003 ರಂದು ಈ ಪ್ರಕರಣದ ವಾದಿ ಶಂಕರ ಸಿದ್ದಪ್ಪ ಗುಂಡಪ್ಪಗೋಳ ಹಾಗೂ ಅವನ ಹೆಂಡತಿ ಮಕ್ಕಳು ಬರೆದುಕೊಟ್ಟ ಹಕ್ಕ

NOTARY R.S. ... Gokak ... GOVT. ...

ಮ.ನಿ.ಮರನಿದರ್ರ

No. of CORRECTIONS

ಬಿಟ್ಟ ಪತ್ರದ ಮೇಲೆ ನಾನು ಮೊದಲನೇ ನಾನೇ ಪಂಚ/ಸಾಕ್ಷಿದಾರ ಅಂತಾ ಸಹಿ ಮಾಡಿರುತ್ತೇನೆ. ಸದರಿ ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಅದೇ ರೀತಿ ಉಳಿದ 3 ಜನ ಸಾಕ್ಷಿದಾರರ ಸಹಿ ನೋಡಿದರೂ ಸಹ ಗುರುತಿಸುತ್ತೇನೆ. ಅದೇ ರೀತಿ ಈ ಪ್ರಕರಣದ ಶಂಕರ ಸಿದ್ದಪ್ಪ ಗುಂಡಪ್ಪಗೋಳ ಇವರು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ಅದನ್ನು ನೋಡಿದರೂ ಸಹ ಗುರುತಿಸುತ್ತೇನೆ. ವಾದಿ ಶಂಕರ ಸಿದ್ದಪ್ಪ ಗುಂಡಪ್ಪಗೋಳ ಮತ್ತು ಅವನ ಹೆಂಡತಿ ಮಕ್ಕಳು ಹಕ್ಕು ಬಿಟ್ಟು ಕೊಟ್ಟಾಗಿನಿಂದ ಮೈತ ಸುಭಾಷ ಗುಂಡಪ್ಪಗೋಳ ತಾನು ಹಯಾತಿವರೆಗೆ ಅವನೇ ಕಬ್ಜಾ ವಹಿವಾಟಿಯಲ್ಲಿದ್ದು ಅವನ ಮರಣಾ ನಂತರ ಅವನ ಹೆಂಡತಿ ಮಕ್ಕಳಾದ ಈ ಪ್ರಕರಣದ ಪ್ರತಿವಾದಿಯರು ಕಬ್ಜಾ ವಹಿವಾಟಿಯಲ್ಲಿರುತ್ತಾರೆ ಅಂತಾ ಮಾಡಿದ ಸಾಕ್ಷಿ ಪ್ರಮಾಣ ಪತ್ರ.

ಸ್ಥಳ: ಗೋಕಾಕ
ದಿನಾಂಕ: 29-07-2026

ಶಪಥವಿಧಿಗಾರ

ಮೇಲೆ ಪ್ರಮಾಣ ಪತ್ರದಲ್ಲಿ ಬರೆದ ಮಜಕೂರು ನನ್ನ ಸ್ವಂತ ಮಾಹಿತಿಯ ಮೇಲಿಂದ ಹೇಳಿ ಬರೆಯಿಸಿದ್ದು ಇದ್ದು ನಿಜವಿರುತ್ತದೆ.

ಸ್ಥಳ: ಗೋಕಾಕ
ದಿನಾಂಕ: 29-07-2026

ಶಪಥವಿಧಿಗಾರ

"ಸದರಿಯವರ ಪರಿಚಯವಿದೆ"

(ಶ್ರೀ ಆರ್.ಎಮ್.ಬಳ್ಳಾರಿ)
ವಕೀಲರು ಗೋಕಾಕ

NOTARY
R.S. Beerannavar
Gokak Rev. Taluka
District:Belagavi
Regd. No.Law/
LCL-213/2026
Exp.16-11-2030
GOVT. OF KARNATAKA

Sworn to before me

R. S. BEERANNAVAR
B.Com., LL.B. (Spl.)
ADVOCATE & NOTARY, GOKAK

29 JUL 2026

No. of CORRECTIONS